**C.Mis.No.39/2017** **PW-01**

**(ಪಾರ್ವತಿ)**

**ಸಾಕ್ಷಿಯನ್ನು ದಿಃ 31.03.2023 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಎದುರುದಾರರ ಪರ ವಕೀಲರಾದ ಶ್ರೀ ಡಿ.ಸಿ ರವರಿಂದಃ**

**1.** ನನ್ನ ಹೆಸರು ಪಾರ್ವತಿ. ನನ್ನ ತಂದೆಯ ಹೆಸರು ಜವರಯ್ಯ. ನನ್ನ ತಾಯಿ ಕೂಲಿ ಕೆಲಸ ಮಾಡುತ್ತಾರೆ. ನನ್ನ ತಂದೆ ಕೂಲಿ ಕೆಲಸ ಮಾಡುತ್ತಿದ್ದರು ಈಗ ತೀರಿ ಹೋಗಿದ್ದಾರೆ. ನನ್ನ ತಾಯಿಗೆ ಓದು ಬರಹ ಗೊತ್ತಿಲ್ಲ. ಎದುರುದಾರರ ಪರ ವಕೀಲರು ಸಾಕ್ಷಿಗೆ ನಿಮ್ಮ ಅರ್ಜಿಯಲ್ಲಿ ನಿಮ್ಮ ಮತ್ತು ಎದುರುದಾರರ ನಡುವೆ ಸುಮಾರು 9 ವರ್ಷಗಳ ಹಿಂದೆ ವಿವಾಹ ಆಗಿರುತ್ತದೆ ಎಂದು ಹೇಳಿದ್ದು ದಿನಾಂಕ, ತಿಂಗಳು ಮತ್ತು ವರ್ಷ ಹೇಳುತ್ತೀರಾ ಎಂದು ಕೇಳಲಾಗಿ ಸಾಕ್ಷಿಯು ದಿನಾಂಕ 27.04.2008 ರಂದು ನನ್ನ ಮತ್ತು ಎದುರುದಾರರ ವಿವಾಹವಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಶಾಲೆಗೆ ಹೋಗಿಲ್ಲ.

**2.** ಎದುರುದಾರರು ನನಗೆ ಮತ್ತು ನನ್ನ ಮಗಳಿಗೆ ಚಿತ್ರಹಿಂಸೆ ಕೊಡುತ್ತಿದ್ದರಿಂದ ಜೀವನ ಮಾಡಲು ಕಷ್ಟ ಆಗಿದ್ದು ನಾವು ಎದುರುದಾರರ ಮನೆಯಿಂದ ಹೊರಬಂದಿದ್ದು ಈಗ ಜೀವನ ಮಾಡಲು ಕಷ್ಟ ಆಗುತ್ತಿದೆ ಹಾಗಾಗಿ ಆತನಿಂದ ಜೀವನಾಂಶ ಕೋರಿ ನಾನು ಅರ್ಜಿ ಹಾಕಿರುತ್ತೇನೆ. ನಿಮ್ಮ ಅರ್ಜಿ ತಯಾರು ವಕೀಲರಿಗೆ ಯಾರು ಮಾಹಿತಿ ಕೊಟ್ಟಿರುತ್ತಾರೆ ಎಂದು ಕೇಳಲಾಗಿ ಸಾಕ್ಷಿಯು ಮಹಿಳಾ ಸಂಘದವರು ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ತಯಾರು ಮಾಡಲು ವಕೀಲರಿಗೆ ಮಹಿಳಾ ಸಂಘದವರೇ ಮಾಹಿತಿ ಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿರುವ ವಿಚಾರವನ್ನು ನಾನು ಓದಿಸಿ ತಿಳಿದುಕೊಂಡಿರುತ್ತೇನೆ. ನಿಮ್ಮ ಮತ್ತು ಎದುರುದಾರರ ನಡುವೆ ಮದುವೆ ನಿಶ್ಚಯದ ಬಗ್ಗೆ ನಿಮ್ಮ ಅಥವಾ ಎದುರುದಾರರ ಮನೆಯಲ್ಲಿ ಮಾತುಕತೆ ಆಯಿತು ಎಂದು ಕೇಳಲಾಗಿ ಸಾಕ್ಷಿಯು ನಮ್ಮ ಮನೆಯಲ್ಲಿ ಆಯಿತು ಎಂದು ನುಡಿಯುತ್ತಾರೆ.

**ಎದುರುದಾರರ ಪರ ವಕೀಲರು ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ಆಲಿಸಿ ಕಾಲಾವಕಾಶ ನೀಡಲಾಯಿತು.**

**(ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸಾ ಸ ಇ ಒ.,**

**ಹೆಚ್ಚುವರಿ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**